**ಕ್ಯಾನ್ಸರ್ ಬಂದರೆ ಮುಗಿಯಿತು. ತಾಯ್ತನದ ಕನವರಿಕೆ ಕರಗಿ ಹೋಗುವುದೆಂಬ ಭಯ ಬೇಡ. ಕ್ಯಾನ್ಸರ್‌ಗೆ ನೀಡಲಾಗುವ ಕೆಲವು ಔಷಧಗಳು ಹಾಗೂ ಚಿಕಿತ್ಸೆಗಳು ಸಂತಾನೋತ್ಪತ್ತಿ ಸಾಮರ್ಥ್ಯದ ಮೇಲೆ ಪರಿಣಾಮ ಬೀರುವುದೂ ಸತ್ಯ. ಆದರೆ ಸಂತಾನಭಾಗ್ಯದ ಅವಕಾಶವನ್ನು ಉಳಿಸಿಕೊಂಡು ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲು ವೈದ್ಯಕೀಯ ವಲಯದಲ್ಲಿ ಅವಕಾಶವಿದೆ.**

ಧರಿಸಲು ರೋಗಿಯು ಸಮರ್ಥರಾಗಿದ್ದಾರೆಂದು ಪರಿಗಣಿತವಾದಾಗ ಈ ಅಂಡಾಣುಗಳನ್ನು ತೆಗೆದು ಪತಿಯ ವೀರ್ಯಾಣುವಿನೊಂದಿಗೆ ಫಲವತ್ತಾಗಿಸಿ, ಸೃಷ್ಟಿಯಾಗುವ ಭ್ರೂಣವನ್ನು ಗರ್ಭಕೋಶಕ್ಕೆ ವರ್ಗಾಯಿಸಬಹುದು' ಎನ್ನುತ್ತಾರೆ ಡಾ. ದೇವಿಕಾ ಗುಣಶೀಲ.

## ಇಲ್ಲಿದೆ ಆಶಾಕಿರಣ

ಕ್ಯಾನ್ಸರ್ ಎಂದ ಕೂಡಲೇ ಹೆಣ್ಣು ತಾಯಿಯಾಗುವ ಅವಕಾಶದಿಂದ ವಂಚಿತಳಾದಳು ಎಂದು ಮರುಗಬೇಕಾದ ಕಾಲ ಇದಲ್ಲ. ವೈದ್ಯಕೀಯ ತಂತ್ರಜ್ಞಾನಗಳು ಅಂಥವರಿಗೆ ವರದಾನವಾಗಬಲ್ಲ ಕೆಲವು ಮಾರ್ಗಗಳನ್ನು ಮುಂದಿಟ್ಟಿವೆ. ಅವುಗಳಲ್ಲಿ ಅಂಡಾಣುಗಳನ್ನು ಸಂರಕ್ಷಿಸಿಡುವ ವಿಧಾನವೂ ಒಂದು.

ಸಾಮಾನ್ಯವಾಗಿ ಒಬ್ಬ ಆರೋಗ್ಯವಂತ ಮಹಿಳೆಯ ಒಂದು ಆವೃತ್ತಿಯಲ್ಲಿ ಒಂದು ಅಥವಾ ಎರಡು ಪಕ್ವವಾದ ಅಂಡಾಣುಗಳು ದೊರೆಯುತ್ತವೆ. ಇಂತಹವರಿಂದ ಹೆಚ್ಚಿನ ಅಂದರೆ 10 ರಿಂದ 12 ಪಕ್ವವಾದ ಅಂಡಾಣುಗಳು ಸಿಗಬೇಕಾದರೆ ಅಂಡಾಶಯವನ್ನು ಪ್ರಚೋದಿಸಲು ಪರಿಣಾಮಕಾರಿಯಾದ ಔಷಧಿಗಳು ಮತ್ತು ಚುಚ್ಚುಮದ್ದು ಕೊಡಬೇಕಾಗುತ್ತದೆ. ಅಂಡಾಣುಗಳನ್ನು ಹೆಚ್ಚಿಸಿ ಭ್ರೂಣ ಸೃಷ್ಟಿಗೆ ನೀಡುವ ಚಿಕಿತ್ಸೆಯ ಅವಧಿ 2–3 ತಿಂಗಳು ಬೇಕಾಗುತ್ತದೆ. ಹೀಗೆ ಸೃಷ್ಟಿಯಾಗುವ ಭ್ರೂಣವನ್ನು ಮುಂದಿನ ದಿನಗಳಲ್ಲಿ ಬಳಸುವ ಸಲುವಾಗಿ ಅದನ್ನು ಸಾರಜನಕದ ದ್ರವದಲ್ಲಿ ಘನೀಕರಿಸಿ ಇಟ್ಟು ದೀರ್ಘಕಾಲದವರೆಗೆ ಸಂರಕ್ಷಿಸಿಡಬಹುದು ಮತ್ತು ಬೇಕೆಂದಾಗ ಈ ಭ್ರೂಣವನ್ನು ಗರ್ಭಾಶಯಕ್ಕೆ ವರ್ಗಾಯಿಸಬಹುದು.



ಆದರೆ ಕ್ಯಾನ್ಸರ್ ಚಿಕಿತ್ಸೆ ನೀಡುವ ಮೊದಲು ನಳಿಕೆ ಕೃಷಿ ಚಿಕಿತ್ಸೆ ಮೂಲಕ ಭ್ರೂಣ ಸೃಷ್ಟಿ ಮಾಡಬೇಕೆಂದರೆ 2–3 ತಿಂಗಳು ಬೇಕಾಗುತ್ತದೆ ಆದರೆ ಚಿಕಿತ್ಸೆಯನ್ನು ಇಷ್ಟು ದೀರ್ಘಾವಧಿಯವರೆಗೆ ಮುಂದೂಡುವುದು ಸೂಕ್ತವಲ್ಲ ಎನ್ನುತ್ತಾರೆ ಸ್ತ್ರೀರೋಗ ತಜ್ಞೆ ಡಾ. ದೇವಿಕಾ ಗುಣಶೀಲ. 'ನಳಿಕೆ ಕೃಷಿ ಚಿಕಿತ್ಸೆಯಲ್ಲಿ ನೀಡುವ ಕೆಲವು ಔಷಧಿಗಳೇ ಕ್ಯಾನ್ಸರ್ ಕಾಯಿಲೆಯ ಹರಡುವಿಕೆಯ ವೇಗವನ್ನು ಹೆಚ್ಚಿಸಬಹುದು. ಆ ಕಾರಣದಿಂದ ನಾವು ಕ್ಯಾನ್ಸರ್‌ಗೊಸ್ಕರ ಚಿಕಿತ್ಸೆಯನ್ನು ಪ್ರಾರಂಭಿಸುವ ಮೊದಲೇ ಉದರದರ್ಶನದ ಮೂಲಕ ಅಂಡಾಶಯದ ಹೊರ ಪದರದಲ್ಲಿರುವ ಅಂಡಾಣುಗಳೆಲ್ಲ ಹೊರಪದರ ಸಮೇತ ಹೆರೆದುಕೊಂಡು ಚಿಕ್ಕ ಚಿಕ್ಕ ಚೂರುಗಳನ್ನಾಗಿ ಮಾಡಿ ಸಾರಜನಕ ದ್ರವದಲ್ಲಿ ಘನೀಕರಿಸಬಹುದು. ಅಥವಾ ಒಂದು ಅಂಡಾಶಯವನ್ನು ದೇಹದಲ್ಲಿ ಬಿಟ್ಟು ಇನ್ನೊಂದನ್ನು ಮಾತ್ರ ಹೊರತೆಗೆದು ಪ್ರಯೋಗಾಲಯದಲ್ಲಿ ನಿಧಾನವಾಗಿ ಮೇಲಿನ ಪದರ ಅಥವಾ ಚಕ್ಕಳವನ್ನು ಬೇರ್ಪಡಿಸಿ ಶೇಖರಿಸಿಟ್ಟು ಕೊಳ್ಳಬಹುದು. ಇದು ತೆಗೆದುಕೊಳ್ಳುವ ಅವಧಿ ಬಹಳ ಕಡಿಮೆ ಇರುತ್ತದೆ. ಹೀಗೆ ಶೇಖರಿಸಿಟ್ಟುಕೊಂಡ ಅಂಡಾಣುಗಳನ್ನು ಎರಡು ವಿಧಾನಗಳಲ್ಲಿ ಅಂಡಾಶಯದಲ್ಲಿ ಮರುಸ್ಥಾಪನೆ ಮಾಡಬಹುದು' ಎನ್ನುವ ವಿವರ ಡಾ. ದೇವಿಕಾ ಗುಣಶೀಲ ಅವರದು.

## ಕ್ಯಾನ್ಸರ್ ಮರುಕಳಿಸುವ ಭೀತಿ

ಕ್ಯಾನ್ಸರ್‌ಗೆ ತುತ್ತಾಗಿ ಬದುಕುಳಿದ ನಂತರ ಗರ್ಭ ಧರಿಸುವುದರಿಂದ ಕ್ಯಾನ್ಸರ್ ಮರುಕಳಿಸುವ ಭೀತಿ ಇಲ್ಲವೇ? ಎಂಬುದು ಅನೇಕರ ಆತಂಕದ ಪ್ರಶ್ನೆ.

ಆದರೆ ಕ್ಯಾನ್ಸರ್‌ನಿಂದ ಪಾರಾದ ಮೇಲೆ ಗರ್ಭ ಧರಿಸುವುದು ತಾಯಿ ಹಾಗೂ ಮಗು ಇಬ್ಬರಿಗೂ ಸುರಕ್ಷಿತವಾದ ಆಯ್ಕೆ. ಆದರೆ ಗರ್ಭ ಧರಿಸುವುದರಿಂದ ಕ್ಯಾನ್ಸರ್ ಮತ್ತೆ ಕಾಣಿಸಿಕೊಳ್ಳುತ್ತದೆ ಎಂಬುದು ತಪ್ಪು ಕಲ್ಪನೆ. ಗರ್ಭ ಧರಿಸುವುದಕ್ಕೂ ಕ್ಯಾನ್ಸರ್ ಮತ್ತೆ ಕಾಣಿಸಿಕೊಳ್ಳುವುದಕ್ಕೂ ಸಂಬಂಧವಿಲ್ಲ. ಆದಾಗ್ಯೂ ಕೆಲವು ಪ್ರಕಾರದ ಕ್ಯಾನ್ಸರ್ ಮರುಕಳಿಸುವ ಸಾಧ್ಯತೆ ಇರುವುದರಿಂದ ಕೆಲವು ವರ್ಷಗಳ ಅಂತರ (ಕ್ಯಾನ್ಸರ್ ಮರುಕಳಿಸಬಹುದಾದ ಹಂತ ದಾಟುವವರೆಗೆ) ಕಾಯ್ದು ಗರ್ಭಧಾರಣೆಯ ಚಿಕಿತ್ಸೆ ನೀಡುವುದು ಉತ್ತಮ.

**(ವೈದ್ಯರ ಸಂಪರ್ಕ: 08026673585)**